# ಕರ್ನಾಟಕ ಸರ್ಕಾರ

## (ವಿದ್ಯುತ್ ಪರಿವೀಕ್ಷಣಾಲಯ)

ಮಾಹಿತಿ ಹಕ್ಕು 2005 ಸೆಕ್ಷನ್ 4 (1) (ಬಿ) ರ ಅನುಗುಣವಾಗಿ ಅಪರ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ದಕ್ಷಿಣರವರ ಕಛೇರಿಯ ಮಾಹಿತಿ.

1. **ವಿದ್ಯುತ್ ಪರಿವೀಕ್ಷಣಾಲಯ ಇಲಾಖೆಯ ರಚನೆ, ಕಾರ್ಯಗಳು ಮತ್ತು ಕರ್ತವ್ಯಗಳ ವಿವರ:-**

ವಿದ್ಯುತ್ ಪರಿವೀಕ್ಷಣಾಲಯವು ಕರ್ನಾಟಕ ಸರ್ಕಾರದ ಒಂದು ಇಲಾಖೆಯಾಗಿದ್ದು, ಇದು ಇಂಧನ ಇಲಾಖೆಯ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತದೆ. ವಿದ್ಯುತ್ ಪರಿವೀಕ್ಷಣಾಲಯದ ಕೇಂದ್ರ ಕಛೇರಿಯು ನಿರ್ಮಾಣ ಭವನ, 2ನೇ ಮಹಡಿ, ಡಾ|| ರಾಜ್‌ಕುಮಾರ್ ರಸ್ತೆ, ರಾಜಾಜಿನಗರ, ಬೆಂಗಳೂರು-560010, ವಿಳಾಸದ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿರುತ್ತದೆ. ಸರ್ಕಾರದ ಮುಖ್ಯ ವಿದ್ಯುತ್ ಪರಿವೀಕ್ಷಕರು, ವಿದ್ಯುತ್ ಪರಿವೀಕ್ಷಣಾಲಯದ ಇಲಾಖಾ ಮುಖ್ಯಸ್ಥರಾಗಿರುತ್ತಾರೆ. ಮುಖ್ಯ ವಿದ್ಯುತ್ ಪರಿವೀಕ್ಷಕರ ಅಧೀನದಲ್ಲಿ ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ, ಮೈಸೂರು, ಧಾರವಾಡ, ಕಲಬುರ್ಗಿ ಮತ್ತು ಮಂಗಳೂರು ಎಂಬ ಆರು ವಲಯಗಳಿದ್ದು, ಅಪರ ಮುಖ್ಯ ವಿದ್ಯುತ್ ಪರಿವೀಕ್ಷಕರು ಬೆಂಗಳೂರು ದಕ್ಷಿಣ ಕಚೇರಿಯು ಒಂದು ವಲಯ ಕಚೇರಿಯಾಗಿರುತ್ತದೆ. ಅಪರ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ದಕ್ಷಿಣ ರವರು ಬೆಂಗಳೂರು ದಕ್ಷಿಣ ವಲಯದ ಮುಖ್ಯಸ್ಥರಾಗಿರುತ್ತಾರೆ. ಬೆಂಗಳೂರು ದಕ್ಷಿಣ ವಲಯದ ಕೇಂದ್ರ ಕಛೇರಿಯು ನಂ: 53/2, ಬುಲ್ ಟೆಂಪಲ್ ರಸ್ತೆ, ನಿಜಗುಣರ ಕ್ಷೇತ್ರದ ಹಿಂಭಾಗ, ಬಸವನಗುಡಿ, ಬೆಂಗಳೂರು-560019 ಇಲ್ಲಿ ಕಾರ್ಯ ನಿರ್ವಹಿಸುತ್ತಿರುತ್ತದೆ. ಬೆಂಗಳೂರು ದಕ್ಷಿಣ ವಲಯದ ವ್ಯಾಪ್ತಿಯಲ್ಲಿ ತಾಂತ್ರಿಕ ವರ್ಗದಲ್ಲಿ 4 ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರುಗಳು, 4 ವಿದ್ಯುತ್ ಪರಿವೀಕ್ಷಕರುಗಳು ಮತ್ತು 7 ಉಪ ವಿದ್ಯುತ್ ಪರಿವೀಕ್ಷಕರುಗಳು ಹಾಗೂ 23 ಸಹಾಯಕ ವಿದ್ಯುತ್ ಪರಿವೀಕ್ಷಕರುಗಳು ಮತ್ತು45 ತಾಂತ್ರಿಕೇತರ ಅಧಿಕ/ ಸಿಬ್ಬಂದಿರವರುಗಳು ಈ ವಲಯ ಕಾರ್ಯವ್ಯಾಪ್ತಿಯಲ್ಲಿ ಈ ಕೆಳಕಂಡಂತೆ ಕಾರ್ಯ ನಿರ್ವಹಿಸುತ್ತಿರುತ್ತಾರೆ.

**ಅಪರ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ದಕ್ಷಿಣ ಕಛೇರಿ ಮತ್ತು ಅಧೀನ ಕಛೇರಿಗಳಿಗೆ ಇಲಾಖಾ ಪುನರ್ ವ್ಯವಸ್ಥೆಯಡಿಯಲ್ಲಿ ಮಂಜೂರಾಗಿರುವ, ಹಂಚಿಕೆಗೊಳಸಿರುವ ಮತ್ತು ರಿಕ್ತ ಸ್ಥಾನಗಳ ವಿವರ**

| ಹುದ್ದೆಗಳ ಹೆಸರು | ಅಮುವಿಪ ಬೆಂ.ದ | | | ಉಮುವಿಪ ಬೆಂ.ಹೆಚ್ಚುವರಿ ಪಶ್ಚಿಮ | | | ಉಮುವಿಪ ಬೆಂ.ಪಶ್ಚಿಮ | | | ಉಮುವಿಪ ಬೆಂ.ಹೆಚ್ಚುವರಿ ದಕ್ಷಿಣ | | | ವಿ.ಪ, ಬೆಂಗಳೂರು ದಕ್ಷಿಣ | | | ಉ.ವಿ.ಪ ತುಮಕೂರು | | | ಉ.ವಿ.ಪ ರಾಮನಗರ | | |
|---|---|---|---|---|---|---|---|---|---|---|---|---|---|---|---|---|---|---|---|---|---|
| | ಅ | ಆ | ಇ | ಅ | ಆ | ಇ | ಅ | ಆ | ಇ | ಅ | ಆ | ಇ | ಅ | ಆ | ಇ | ಅ | ಆ | ಇ | ಅ | ಆ | ಇ |
| ಅಮುವಿಪ | 1 | 1 | 0 | - | - | - | - | - | - | - | - | - | - | - | - | - | - | - | - | - | - |
| ಉಮುವಿಪ | 1 | 1 | 0 | 1 | 1 | 0 | 1 | 1 | 0 | 1 | 1 | 0 | - | - | - | - | - | - | - | - | - |
| ವಿಪ | 0 | 0 | 0 | 1 | 1 | 0 | 1 | 1 | 0 | 1 | 1 | 0 | 1 | 1 | 0 | - | - | - | - | - | - |
| ಉವಿಪ | 0 | 0 | 0 | 1 | 1 | 0 | 1 | 1 | 0 | 1 | 1 | 0 | 2 | 2 | 0 | 1 | 1 | 0 | 1 | 1 | 0 |
| ಸವಿಪ | 2 | 2 | 0 | 3 | 2 | 1 | 3 | 2 | 1 | 4 | 2 | 2 | 7 | 1 | 6 | 3 | 1 | 2 | 1 | 1 | 0 |
| ಲೆಕ್ಕಾಧಿಕಾರಿ | 1 | 0 | 1 | - | - | - | - | - | - | - | - | - | - | - | - | - | - | - | - | - | - |
| ವ್ಯವಸ್ಥಾಪಕರು | 1 | 1 | 0 | - | - | - | - | - | - | - | - | - | - | - | - | - | - | - | - | - | - |
| ಅಧೀಕ್ಷಕರು | 2 | 2 | 0 | 1 | 0 | 1 | 1 | 0 | 1 | 1 | 0 | 1 | - | - | - | - | - | - | - | - | - |
| ಪ್ರ.ದ.ಸ | 2 | 0 | 2 | 1 | 0 | 1 | 1 | 0 | 1 | 1 | 1 | 0 | 1 | 1 | 0 | 1 | 0 | 1 | 1 | 1 | 0 |
| ಶೀಘ್ರ ಲಿಪಿಕಾರರು | 1 | 0 | 1 | - | - | - | - | - | - | - | - | - | - | - | - | - | - | - | - | - | - |
| ದ್ವಿ.ದ.ಸ | 2 | 2 | 0 | 2 | 1 | 1 | 2 | 1 | 1 | 2 | 0 | 2 | 1 | 1 | 0 | 1 | 0 | 1 | 1 | 0 | 1 |
| ಗಣಕ ಯಂತ್ರ ಆಪರೇಟರ್ | 0 | 0 | 0 | 1 | 1 | 0 | 1 | 0 | 1 | 1 | 1 | 0 | - | - | - | - | - | - | - | - | - |
| ಚಾಲಕರು | 1 | 0 | 1 | 1 | 0 | 1 | - | - | - | - | - | - | - | - | - | - | - | - | 1 | 1 | 0 |
| ಸಹಾಯಕರು | 1 | 0 | 1 | 1 | 0 | 1 | 1 | 0 | 1 | 1 | 0 | 1 | - | - | - | 1 | 0 | 1 | - | - | - |
| ಗ್ರೂಫ್ ಡಿ | 1 | 1 | 0 | 1 | 0 | 1 | 1 | 1 | 0 | 1 | 1 | 0 | 1 | 1 | 0 | 1 | 0 | 1 | 1 | 1 | 0 |
| ಒಟ್ಟು | 16 | 10 | 6 | 14 | 7 | 7 | 13 | 7 | 6 | 14 | 8 | 6 | 13 | 7 | 6 | 8 | 2 | 6 | 6 | 5 | 1 |

ಅ).ಮಂಜೂರಾದ ಹುದ್ದೆಗಳು, ಆ) ಹಂಚಿಕೆಗೊಳಸಿರುವ ಹುದ್ದೆಗಳು, ಇ) ಖಾಲಿ ಇರುವ ಹುದ್ದೆಗಳು

ಷರಾ: ಅಪರ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ದಕ್ಷಿಣ ಕಚೇರಿಗೆ ಒಂದು ಗಣಕ ಯಂತ್ರ ಆಪ್‌ರೇಟರನ್ನು ಹೋರಗುತ್ತಿಗೆ ಆಧಾರದಲ್ಲಿ ಮುಖ್ಯ ವಿದ್ಯುತ್ ಪರಿವೀಕ್ಷಕರ ಕಛೇರಿ ಅ. ಜ್ಞಾ. ಪತ್ರ. ಸಂ. ಮುವಿಪ/ಸಿ.ಸ-1/19756-62/18-19, ದಿನಾಂಕ: 20.08.18ರ ಮೇರೆಗೆ ನೇಮಿಸಿಕೊಳ್ಳಲಾಗಿದೆ.

**ಬೆಂಗಳೂರು ದಕ್ಷಿಣ ವಲಯ ವ್ಯಾಪ್ತಿಯ ಕಚೇರಿಗಳ ಮುಖ್ಯ ಉದ್ದೇಶಗಳು:**

ವಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲಾ ವಿಧವಾದ ವಿದ್ಯುತ್ ಸ್ಥಾವರಗಳು, ವಿದ್ಯುತ್ ಪ್ರಸರಣಾ ಮಾರ್ಗಗಳು ಮತ್ತು ವಿತರಣಾ ಕೇಂದ್ರಗಳು ಕೇಂದ್ರ ವಿದ್ಯುತ್ ಪ್ರಾಧಿಕಾರ (ಸುರಕ್ಷತೆಗೆ ಸಂಬಂಧಿಸಿದ ಕ್ರಮಗಳನ್ನು) ನಿಯಂತ್ರಣ, 2010ಕ್ಕೆ ಅನುಗುಣವಾಗಿ ಸುರಕ್ಷಿತವಾಗಿರುವ ಹಾಗೆ ನಿರ್ವಹಿಸುವುದು ಮತ್ತು ಪಾಲನೆ ಮಾಡುವುದರ ಬಗ್ಗೆ ಗ್ರಾಹಕರುಗಳಿಗೆ ಸೂಕ್ತ ಮಾರ್ಗದರ್ಶನ ನೀಡಿ ವಿದ್ಯುತ್ತಿನಿಂದ ಮಾನವನಿಗೆ, ಪ್ರಾಣಿಗಳಿಗೆ ಮತ್ತು ಸಾರ್ವಜನಿಕರ ಆಸ್ತಿ-ಪಾಸ್ತಿಗಳಿಗೆ ಯಾವುದೇ ರೀತಿಯ ಹಾನಿಯಾಗದಂತೆ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳುವ ಬಗ್ಗೆ ವಿದ್ಯುತ್ ಗ್ರಾಹಕರುಗಳಿಗೆ ಹಾಗೂ ಸರಬುರಾಜುದಾರರಿಗೆ ಸಲಹೆ ನೀಡುವುದು.

**ಮೇಲಿನ ಮುಖ್ಯ ಉದ್ದೇಶಗಳನ್ನು ಕಾರ್ಯ ರೂಪಕ್ಕೆ ತರಲು ಅಪರ ಮುಖ್ಯ ವಿದ್ಯುತ್ ಪರಿವೀಕ್ಷಕರ ಕಚೇರಿ, ಬೆಂಗಳೂರು ದಕ್ಷಿಣ ವಲಯ ಕೆಳಗಿನ ಕರ್ತವ್ಯಗಳನ್ನು ನಿರ್ವಹಿಸುತ್ತದೆ.**

ವಿದ್ಯುತ್ ಬಳಕೆದಾರರ ಮತ್ತು ಸರಬರಾಜುದಾರರ ವಿದ್ಯುತ್ ಸ್ಥಾವರಗಳನ್ನು ಕೇಂದ್ರಿಯ ವಿದ್ಯುಚ್ಛಕ್ತಿ ಪ್ರಾಧಿಕಾರ (ಸುರಕ್ಷತಾ ಹಾಗೂವಿದ್ಯುತ್ ಪೂರೈಕೆಗೆ ಸಂಬಂಧಿಸಿದ) ನಿಬಂಧನೆಗಳು, 2010ರ ಅನುಗುಣವಾಗಿ ಸ್ಥಾಪಿಸುವುದು ಕಡ್ಡಾಯವಾಗಿರುವುದರಿಂದ ನಿಯಮಗಳ ಪ್ರಕಾರ ವಿದ್ಯುತ್ ಮಾರ್ಗಗಳು ವಿತರಣಾ ಕೇಂದ್ರಗಳು, ಅಧಿಕ ಒತ್ತಡ ಸ್ಥಾವರ, ವಿದ್ಯುತ್ ಜನಕಗಳು ಮತ್ತು ಬಹುಮಹಡಿ ಕಟ್ಟಡ, ಲಿಫ್ಟ್/ಎಸ್ಕಲೇಟರ್‌ಗಳು, ತಾತ್ಕಾಲಿಕ ವಿದ್ಯುತ್ ಸ್ಥಾವರಗಳ ಅನುಮೋದನೆಯಾದ ನೀಲಿ ನಕ್ಷೆಯ ಪ್ರಕಾರ ಸ್ಥಾಪಿಸುವಂತೆ ತಿಳುವಳಿಕೆ ನೀಡುವುದು.

1. ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ಮತ್ತು ವಿದ್ಯುತ್ ಸರಬರಾಜುದಾರ ಕಂಪನಿ ಬೆಸ್ಕಾಂ ವ್ಯಾಪ್ತಿಯಲ್ಲಿ ಬರುವ ಎಲ್ಲಾ 110ಕೆ.ವಿ ಮತ್ತು ಅದಕ್ಕಿಂತ ಕೆಳಗಿನ ಒತ್ತಡದ ವಿದ್ಯುತ್ ಮಾರ್ಗಗಳ, ಇಹೆಚ್‌ವಿ/ಹೆಚ್‌ವಿ/ಎಮ್‌ವಿ ವಿದ್ಯುತ್ ಮಾರ್ಗಗಳ ಮತ್ತು ವಿದ್ಯುತ್ ವಿತರಣಾ ಕೇಂದ್ರಗಳ ನೀಲಿ ನಕ್ಷೆ ಅನುಮೋದನೆ ಮತ್ತು ಪರಿವೀಕ್ಷಣೆ ಹಾಗೂ ಅನುಮೋದನೆ.
2. 4000 ಕೆ.ವಿ.ಎ ರವರೆಗಿನ ಗ್ರಾಹಕರ ವಿದ್ಯುತ್ ಸ್ಥಾವರಗಳ ನೀಲಿ ನಕ್ಷೆ ಅನುಮೋದನೆ, ಪರಿವೀಕ್ಷಣೆ ಹಾಗೂ ಅನುಮೋದನೆ,
3. ಎಲ್ಲಾ ಲಿಫ್ಟ್‌ಗಳು/ಎಸ್ಕ್‌ಲೇಟರಗಳು/ಟ್ರ್ಯಾವಲೇಟರ್ಸ್‌ಗಳ ಸ್ಥಾಪನಾ ಅನುಮೋದನೆ ಮತ್ತು ಪರಿವೀಕ್ಷಣೆ ಮತ್ತು ಶಿಫಾರಸ್ಸು.
4. ಎಲ್ಲಾ ಕ್ಷ-ಕಿರಣಗಳು, ನಿಯೋನ್‌ಸೈನ್‌ಗಳ ನೀಲಿ ನಕ್ಷೆ ಅನುಮೋದನೆ, ಪರಿವೀಕ್ಷಣೆ ಹಾಗೂ ಅನುಮೋದನೆ.
5. ಎಲ್ಲಾ 24ಮೀಟರ್ ಎತ್ತರದವರೆಗಿನ ಬಹುಮಹಡಿ ಕಟ್ಟಡದಲ್ಲಿ ಅಳವಡಿಸಿರುವ 3500ಕೆವಿಎ ಸಾಮರ್ಥ್ಯದವರೆಗಿನ ವಿದ್ಯುತ್ ಪರಿವರ್ತಕ ಮತ್ತು 3500 ಕೆ.ವಿ.ಎವರೆಗಿನ ವಿದ್ಯುತ್‌ಜನಕಗಳ ಹೆಚ್.ಟಿ/ಎಲ್.ಟಿ ಸಪ್ಲೈ ಇವುಗಳ ನೀಲಿ ನಕ್ಷೆ ಅನುಮೋದನೆ ಮತ್ತು ಪರಿವೀಕ್ಷಣೆ ಹಾಗೂ ಅನುಮೋದನೆ.
6. ಗ್ರಾಹಕರ ವಿದ್ಯುತ್ ಸ್ಥಾವರದಲ್ಲಿ ಅಳವಡಿಸಿರುವ 4000ಕೆ.ವಿ.ಎ ಸಾಮರ್ಥ್ಯದವರೆಗಿನ ವಿದ್ಯುತ್ ಪರಿವರ್ತಕ ಮತ್ತು 4000 ಕೆ.ವಿ.ಎವರೆಗಿನ ವಿದ್ಯುತ್‌ಜನಕಗಳ ನೀಲಿ ನಕ್ಷೆ ಅನುಮೋದನೆ ಮತ್ತು ಪರಿವೀಕ್ಷಣೆ ಹಾಗೂ ಅನುಮೋದನೆ.
7. ಎಲ್ಲಾ ಶಾಶ್ವತ, ಅರೆಶಾಶ್ವತ ಮತ್ತು ತಾತ್ಕಾಲಿಕ ಚಿತ್ರಮಂದಿರಗಳ ನೀಲಿ ನಕ್ಷೆ ಅನುಮೋದನೆ ಮತ್ತು ಪರಿವೀಕ್ಷಣೆ ಹಾಗೂ ವಿದ್ಯುತ್ ಯೋಗ್ಯತಾ ಪತ್ರ ನೀಡುವುದು ಮತ್ತು ವಿದ್ಯುತ್ ಯೋಗ್ಯತಾ ಪತ್ರ ನವೀಕರಿಸುವುದು.
8. 100ಜನರಿಗಿಂತಲೂ ಹೆಚ್ಚಿನ ಜನಸಂದಣಿ ಇರುವಂತಹ ಸಮಾರಂಭಗಳಲ್ಲಿ ಅಳವಡಿಸಿರುವ ತಾತ್ಕಾಲಿಕ ವಿದ್ಯುತ್ ಸ್ಥಾವರಗಳ ಪರಿವೀಕ್ಷಣೆ ಮತ್ತು ಅನುಮೋದನೆ.
9. 8 ಜನ ಮಾನವರವರೆಗಿನ ಮಾರಕ (ಮರಣಾಂತಿಕ), ಎಲ್ಲಾ ಪ್ರಾಣಿಗಳಿಗೆ ಮಾರಣಾಂತಿಕ, ಮಾನವರಿಗೆ ಮರಣಾಂತಿಕವಲ್ಲದ ವಿದ್ಯುತ್ ಅಪಘಾತಗಳ ಹಾಗೂ ಲಿಫ್ಟ್ಸ್, ಎಸ್ಕ್‌ಲೇಟರ್ಸ್ ಮತ್ತು ಕನ್‌ವೇಯರ್ಸ್‌ಗಳಲ್ಲಿ ಸಂಭವಿಸುವ ಅಪಘಾತಗಳ ತನಿಖೆ ನಡೆಸುವುದು ಮತ್ತು ಸರ್ಕಾರಕ್ಕೆ ತನಿಖಾ ವರದಿಗಳನ್ನು ಸಲ್ಲಿಸುವುದು.
10. ಅಧಿಕಾರಿಗಳ ಕಾರ್ಯವ್ಯಾಪ್ತಿಗೆ ಬರುವ ವಿವಾದಿತ ವಿದ್ಯುತ್ ಮಾಪನಗಳ ಖಚಿತತೆ ಬಗ್ಗೆ ನಡೆಯುವ ಮಾಪನಾಂಕ ನಿರ್ಣಯಗಳಲ್ಲಿ ಸಾಕ್ಷಿಕರಿಸುವುದು.
11. ಈ ಇಲಾಖೆಯುಕೇಂದ್ರಿಯ ವಿದ್ಯುಚ್ಛಕ್ತಿ ಪ್ರಾಧಿಕಾರ (ಸುರಕ್ಷತಾ ಹಾಗೂವಿದ್ಯುತ್ ಪೂರೈಕೆಗೆ ಸಂಬಂಧಿಸಿದ) ನಿಬಂಧನೆಗಳು, 2010ರ ರ ಪ್ರಕಾರ ಎಲ್ಲಾ ವಿದ್ಯುತ್ ಸ್ಥಾವರಗಳ ನಿಯತಕಾಲಿಕ ಪರಿವೀಕ್ಷಣೆಯನ್ನು ಆಯಾ ಅಧಿಕಾರಿಗಳು ಅವರವರ ಕಾರ್ಯ ವ್ಯಾಪ್ತಿ ಮತ್ತು ಅಧಿಕಾರ ವ್ಯಾಪ್ತಿಯ ಅನುಸಾರವಾಗಿ ನಿಯತಕಾಲಿಕ ಪರಿವೀಕ್ಷಣೆಯನ್ನು ನಡೆಸುವುದು.
12. ಈ ಇಲಾಖೆಯು ಕರ್ನಾಟಕ (ವಿದ್ಯುತ್ ಗುತ್ತಿಗೆದಾರರು, ವಿಶೇಷ ತಂತಿಜಾಲ ಅನುಮತಿ ಮತ್ತು ಮೇಲ್ವಿಚಾರಕರು ಮತ್ತು ವೈರ್‌ಮನ್‌ಗಳ ಪರವಾನಿಗೆ ಮತ್ತು ಅನುಮತಿ) ನಿಯಮಗಳು 2012 ಅನ್ನು ಜಾರಿಗೊಳಿಸಿರುತ್ತದೆ. ಅಪರ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ದಕ್ಷಿಣ ರವರ ವ್ಯಾಪ್ತಿಗೆ ಬರುವ ಉಪ ವಿದ್ಯುತ್ ಪರಿವೀಕ್ಷಕರುಗಳು ಈ ನಿಯಮಗಳನುಸಾರ ವರುಗಳ ಕಾರ್ಯ ವ್ಯಾಪ್ತಿಗೆ ಸಂಬಂಧಪಟ್ಟ ಅರ್ಜಿಗಳನ್ನು ಅವರ

ಹಂತದಲ್ಲೆ ಸ್ವೀಕರಿಸಿ,ಸರ್ಕಾರದ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರುರವರಿಗೆ ಸಲ್ಲಿಸಲಾಗುವುದು ಹಾಗೂ ಉಪ ವಿದ್ಯುತ್ ಪರಿವೀಕ್ಷಕರುಗಳ ಹಂತದಲ್ಲಿ ಮೇಲ್ವಿಚಾರಕರ ಮತ್ತು ತಂತಿ ರಹದಾರಿಗಳನ್ನು ವಿದ್ಯುತ್ ಗುತ್ತಿಗೆದಾರರ ಪರವಾನಿಗೆಗಳಿಗೆ ಹಿಂಬರಹಗೊಳಿಸುವುದು.

13. ಸಿನೆಮಾ ಆಪರೇಟರ್‌ಗಳ ಪರವಾನಗಿಗಳನ್ನು ನವೀಕರಣ/ಹಿಂಬರಹವನ್ನು ಆಯಾ ಕ್ಷೇತ್ರೀಯ ವಿದ್ಯುತ್ ಪರಿವೀಕ್ಷಕರುಗಳ ಕಛೇರಿಗಳಲ್ಲಿ ನೀಡುವುದು ಹಾಗೂ ಗತಿಸಿದ ಪರವಾನಿಗೆಗಳನ್ನು ಮುಖ್ಯ ವಿದ್ಯುತ್ ಪರಿವಿಕ್ಷಕರ ಕಛೇರಿಯಲ್ಲಿಮಾನ್ಯತೆಗಳಿಗಾಗಿ ಸಲ್ಲಿಸುವುದು.

**2. ಅಪರ ಮುಖ್ಯ ವಿದ್ಯುತ್ ಪರಿವೀಕ್ಷಕರ ಕಚೇರಿ, ಬೆಂಗಳೂರು ದಕ್ಷಿಣ ವಲಯ ಕಛೇರಿಯ ಅಧಿಕಾರಿಗಳ ಮತ್ತು ನೌಕರರ ಕರ್ತವ್ಯಗಳು:-**

**ಅಪರ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ದಕ್ಷಿಣ ವಲಯ:**

ಅಪರ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ದಕ್ಷಿಣರವರು, ಬೆಂಗಳೂರು ದಕ್ಷಿಣ ವಲಯದ ಕಛೇರಿಯ ತಾಂತ್ರಿಕ ಮತ್ತು ಆಡಳಿತಾತ್ಮಕ ವಿಷಯಗಳಿಗೆ ಮುಖ್ಯಸ್ಥರಾಗಿರುತ್ತಾರೆ. ಅಪರ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ದಕ್ಷಿಣ ವಲಯದ ಕಾರ್ಯ ವ್ಯಾಪ್ತಿಯು ಬೆಸ್ಕಾಂನ ಉಪ ವಿಭಾಗದ ಎಸ್-1 ರಿಂದ ಎಸ್-12, ಡಬ್ಲ್ಯೂ-1 ರಿಂದ ಡಬ್ಲ್ಯೂ-7, ಕೆ1, ಕೆ2, ಕೆ3, ಎನ್6, ಎನ್-8, ತಾವರೇಕೆರೆ, ಆನೇಕಲ್, ಚಂದಾಪುರ, ಅತ್ತೀಬೆಲೆ, ತುಮಕೂರು ಮತ್ತು ರಾಮನಗರ ಜಿಲ್ಲೆಗಳು ಆಗಿದ್ದು, ಅಧಿಕಾರ ಪ್ರತ್ಯಾಯೋಜನೆಯಂತೆ ಈ ಕೆಳಕಂಡ ಕರ್ತವ್ಯಗಳನ್ನು ನಿರ್ವಹಿಸುತ್ತಿರುತ್ತಾರೆ.

1. 66ಕೆ.ವಿ.ಗಿಂತ ಮೇಲ್ಪಟ್ಟ ಮತ್ತು 220ಕೆ.ವಿವರೆಗಿನ(220ಕೆ.ವಿ ಹೊರತುಪಡಿಸಿ) ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ವಿತರಣಾ ಕೇಂದ್ರಗಳ ಮತ್ತು ವಿದ್ಯುತ್ ಪ್ರಸರಣ ಮಾರ್ಗಗಳ, 2000 ಕೆ.ವಿ.ಎ ಮೇಲ್ಪಟ್ಟು 3500ಕೆ.ವಿ.ಎವರೆಗಿನ ಗ್ರಾಹಕರ ವಿದ್ಯುತ್ ಸ್ಥಾವರದಲ್ಲಿ ಹೊಂದಿರುವ ವಿದ್ಯುತ್ ಪರಿವರ್ತಕ ಮತ್ತು 2000 ಕೆ.ವಿ.ಎ ಮೇಲ್ಪಟ್ಟು 3500ಕೆ.ವಿ.ಎವರೆಗಿನ ವಿದ್ಯುತ್ ಜನಕಗಳನ್ನೊಳಗೊಂಡ ಹೆಚ್.ಟಿ/ಎಲ್.ಟಿ24ಮೀಟರ್ ಎತ್ತರದವರೆಗಿನ ಬಹುಮಹಡಿ ಕಟ್ಟಡಗಳು ಮತ್ತು2000ಕೆ.ವಿ.ಎ ಗಿಂತ ಮೇಲ್ಪಟ್ಟು 4000 ಕೆ.ವಿ.ಎವರೆಗಿನ ಗ್ರಾಹಕರ ಹೆಚ್.ಟಿ ವಿದ್ಯುತ್ ಪರಿವರ್ತಕಗಳು ಹಾಗೂ2000ಕೆ.ವಿ.ಎ ಗಿಂತ ಮೇಲ್ಪಟ್ಟು 4000 ಕೆ.ವಿ.ಎವರೆಗಿನವಿದ್ಯುತ್ ಜನಕಗಳ ಹಾಗೂ2000 ಕೆ.ವಿ.ಎ ಮೇಲ್ಪಟ್ಟು 3500ಕೆ.ವಿ.ಎವರೆಗಿನ ಗ್ರಾಹಕರ ವಿದ್ಯುತ್ ಸ್ಥಾವರದಲ್ಲಿ ಹೊಂದಿರುವ ವಿದ್ಯುತ್ ಪರಿವರ್ತಕ ಮತ್ತು 2000 ಕೆ.ವಿ.ಎ ಮೇಲ್ಪಟ್ಟು 3500ಕೆ.ವಿ.ಎವರೆಗಿನ ವಿದ್ಯುತ್ ಜನಕಗಳನ್ನೊಳಗೊಂಡ ಹೆಚ್.ಟಿ/ಎಲ್.ಟಿ24ಮೀಟರ್ ಎತ್ತರದವರೆಗಿನ ಬಹುಮಹಡಿ ಕಟ್ಟಡಗಳಲ್ಲಿ ಅಳವಡಿಸುವಲಿಫ್ಟ್, ಎಸ್ಕಲೇಟರ್ಸ್‌ನ ಮತ್ತು ಪ್ಯಾಸೆಂಜರ್ ಕನ್ವೇಯರ್‌ಗಳ, ಶಾಶ್ವತ ಚಿತ್ರಮಂದಿರಗಳ, 2000ಕೆವಿಎ ಗಿಂತ ಮೇಲ್ಪಟ್ಟ ತಾತ್ಕಾಲಿಕ ವಿದ್ಯುತ್ ಸ್ಥಾವರಗಳ ನೀಲಿ ನಕ್ಷೆ ಅನುಮೋದನೆ ಮತ್ತು ಪ್ರಾಥಮಿಕ ಪರಿವೀಕ್ಷಣೆ ಮಾಡುವುದು.

2. 220ಕೆ.ವಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ವಿತರಣಾ ಕೇಂದ್ರಗಳ ಮತ್ತು 20 ಮೆ.ವ್ಯಾ ಸಾಮರ್ಥ್ಯಕ್ಕಿಂತ ಮೇಲ್ಪಟ್ಟ ಎಲ್ಲಾ ವಿದ್ಯುತ್ ಉತ್ಪಾದನಾ ಕೇಂದ್ರಗಳ,1500 ಕೆ.ವಿ.ಎ ಸಾಮರ್ಥ್ಯಕ್ಕಿಂತ ಮೇಲ್ಪಟ್ಟ ಎಲ್ಲಾ ಗಾಳಿ ವಿದ್ಯುತ್ ಉತ್ಪಾದನಾ ಕೇಂದ್ರಗಳು, 15000ಕೆವಿಎ ಮೇಲ್ಪಟ್ಟ ಗ್ರಾಹಕರ ಅಧಿಕ ಒತ್ತಡ ಪರಿವರ್ತಕ , ವಿದ್ಯುತ್ ಜನಕಗಳ,ಎಲ್ಲಾಮಲ್ಟಿಪ್ಲೆಕ್ಸ್ ಸಿನಿಮಾಗಳ, 24ಮೀಟರ್ ಗಿಂತ ಮೇಲಿನ ಹೆಚ್.ಟಿ ಬಹುಮಹಡಿ ಕಟ್ಟಡಗಳ ನಿಯತಕಾಲಿಕ ಪರಿವೀಕ್ಷಣೆ ಮಾಡುವುದು ಹಾಗೂ ಮಲ್ಟಿಪ್ಲೆಕ್ಸ್ ಸಿನಿಮಾಗಳಿಗೆ ವಿದ್ಯುತ್ ಯೋಗ್ಯತಾ ಪತ್ರ ನೀಡುವುದು.

3. 8 ಜನರಿಗಿಂತ ಹೆಚ್ಚಿನ ಮಾನವರನ್ನೊಳಗೊಂಡ ಮರಣಾಂತಿಕ ವಿದ್ಯುತ್ ಅಪಘಾತಗಳ ತನಿಖೆ ಮತ್ತುಲಿಫ್ಟ್ಸ್, ಎಸ್ಕಲೇಟರ್ಸ್ ಮತ್ತು ಕನ್‌ವೇಯರ್ಸ್‌ಗಳಲ್ಲಿ ಸಂಭವಿಸಿದಂತಹ ಅಪಘಾತಗಳ ತನಿಖೆ ಮಾಡಿ, ಸದರಿ ಅಪಘಾತಗಳ ವರದಿಗಳನ್ನುಮುಖ್ಯ ವಿದ್ಯುತ್ ಪರಿವೀಕ್ಷಕರಿಗೆ ಸಲ್ಲಿಸುವುದು ಮತ್ತು ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರುಗಳು (ವೃತ್ತವಾರು) ಸಲ್ಲಿಸಿದ 5 ಜನರಿಗಿಂತ ಅಧಿಕ ಮತ್ತು 8 ಜನಮಾನವರನ್ನೊಳಗೊಂಡ ಮಾರಣಾಂತಿಕ ವಿದ್ಯುತ್ ಅಪಘಾತಗಳ ತನಿಖಾ ವಿವರಗಳ ಆಧಾರದ ಮೇಲೆ ಅಂತಿಮ ವರದಿಗಳನ್ನು ಸರ್ಕಾರಕ್ಕೆ ಸಲ್ಲಿಸುವುದು.

4. ವಲಯವಾರು ಮಾಸಿಕ ಪ್ರಗತಿ ವರದಿ, ಡಿ.ಸಿ.ಬಿ, ಖರ್ಚು ವೆಚ್ಚಗಳ ವರದಿ, ಚಲನ್ ರಿಕನ್ಸಿಲಿಯೇಷನ್‌ಗಳ ಕ್ರೋಢೀಕೃತ ವರದಿಗಳನ್ನು ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರುರವರಿಗೆ ಸಲ್ಲಿಸುವುದು.

**2) ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ದಕ್ಷಿಣ:**

ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರವರು ಬೆಂಗಳೂರು ದಕ್ಷಿಣವೃತ್ತಕ್ಕೆ ತಾಂತ್ರಿಕ ಮುಖ್ಯಸ್ಥರಾಗಿರುತ್ತಾರೆ. ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ದಕ್ಷಿಣ ವಲಯದ ಕಾರ್ಯ ವ್ಯಾಪ್ತಿಯು ಬೆಸ್ಕಾಂನ ಉಪ ವಿಭಾಗದ ಎಸ್-1 ದಿಂದ ಎಸ್-9, ಅತ್ತಿಬೆಲೆ ಮತ್ತು ಚಂದಾಪುರ ಆಗಿರುತ್ತದೆ ಹಾಗೂ ಅಧಿಕಾರ ಪ್ರತ್ಯಾಯೋಜನೆಯಂತೆ ಈ ಕೆಳಕಂಡ ಕರ್ತವ್ಯಗಳನ್ನು ನಿರ್ವಹಿಸುತ್ತಿರುತ್ತಾರೆ.

1. 33ಕೆ.ವಿಗಿಂತ ಮೇಲ್ಪಟ್ಟ ಮತ್ತು 66ಕೆ.ವಿ ವರೆಗಿನ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ವಿತರಣಾ ಕೇಂದ್ರಗಳ ಮತ್ತು ವಿದ್ಯುತ್ ಪ್ರಸರಣ ಮಾರ್ಗಗಳ,ಗ್ರಾಹಕರ ಹೆಚ್.ಟಿ 500ಕೆ.ವಿ.ಎ ಗಿಂತ ಮೇಲ್ಪಟ್ಟ ಮತ್ತು 2000ಕೆವಿಎವರೆಗಿನ ವಿದ್ಯುತ್ ಪರಿವರ್ತಕ ಮತ್ತು ವಿದ್ಯುತ್ ಜನಕಗಳ, 100 ಕೆ.ವಿ.ಎಗಿಂತ ಮೇಲ್ಪಟ್ಟ ಮತ್ತು 2000ಕೆ.ವಿ.ಎವರೆಗಿನ ವಿದ್ಯುತ್ ಪರಿವರ್ತಕ ಮತ್ತು 2000ಕೆ.ವಿ.ಎವರೆಗಿನ ವಿದ್ಯುತ್ ಜನಕಗಳನ್ನೊಳಗೊಂಡ 24ಮೀಟರ್ ಎತ್ತರದವರೆಗಿನ ಹೆಚ್.ಟಿ/ಎಲ್.ಟಿ ಬಹುಮಹಡಿ ಕಟ್ಟಡಗಳು ಮತ್ತು ಅದರಲ್ಲಿ ಅಳವಡಿಸಿರುವ ಲಿಫ್ಟ್/ಎಸ್ಕಲೇಟರ್ಸ್‌ನ, ಅರೆಖಾಯಂ ಚಿತ್ರಮಂದಿರಗಳ, ನೀಲಿ ನಕ್ಷೆ ಅನುಮೋದನೆ ಮತ್ತು ಪ್ರಾಥಮಿಕ ಪರಿವೀಕ್ಷಣೆ ಮಾಡುವುದು. 500ಕೆ.ವಿ.ಎ ಗಿಂತ ಮೇಲ್ಪಟ್ಟ ಮತ್ತು 2000ಕೆ.ವಿ.ಎವರೆಗಿನ ಟ್ರೇಡ್ ಫೇರ್, ಪ್ರದರ್ಶನಗಳ ತಾತ್ಕಾಲಿಕ ವಿದ್ಯುತ್ ಸ್ಥಾವರಗಳ ಪರಿವೀಕ್ಷಣೆ ಮಾಡುವುದು.
2. 66ಕೆ.ವಿಗಿಂತ ಮೇಲ್ಪಟ್ಟ ಮತ್ತು 220ಕೆ.ವಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ವಿತರಣಾ ಕೇಂದ್ರಗಳ, 1500ಕಿ.ವ್ಯಾ ಸಾಮರ್ಥ್ಯರವರೆಗಿನ ಎಲ್ಲಾ ಗಾಳಿ ವಿದ್ಯುತ್ ಉತ್ಪಾದನಾ ಕೇಂದ್ರಗಳು, 20 ಮೆ.ವ್ಯಾ ಸಾಮರ್ಥ್ಯರವರೆಗಿನ ಎಲ್ಲಾ ವಿದ್ಯುತ್ ಉತ್ಪಾದನಾ ಕೇಂದ್ರಗಳು, 3000ಕೆ.ವಿ.ಎ ಗಿಂತ ಮೇಲ್ಪಟ್ಟ ಮತ್ತು 15000ಕೆ.ವಿ.ಎವರೆಗಿನ ಗ್ರಾಹಕರ ಹೆಚ್.ಟಿ ಪರಿವರ್ತಕ ಮತ್ತು 3000ಕೆ.ವಿ.ಎ ಗಿಂತ ಮೇಲ್ಪಟ್ಟ ಮತ್ತು 15000ಕೆ.ವಿ.ಎವರೆಗಿನ ವಿದ್ಯುತ್ ಜನಕಗಳ,ಹೆಚ್.ಟಿ ಸಪ್ಲೈ ನ 24ಮೀಟರ್ ವರೆಗಿನ ಬಹುಮಹಡಿ ಕಟ್ಟಡಗಳ ಮತ್ತು ಎಲ್ಲಾ ಶಾಶ್ವತ ಚಿತ್ರಮಂದಿರಗಳ ನಿಯತಕಾಲಿಕ ಪರಿವೀಕ್ಷಣೆ ಮಾಡುವುದು, ಶಾಶ್ವತ ಚಿತ್ರ ಮಂದಿರಗಳಿಗೆ ವಿದ್ಯುತ್ ಯೋಗ್ಯತಾ ಪತ್ರ ನೀಡುವುದು.
3. 5 ಜನರಿಗಿಂತ ಹೆಚ್ಚಿನ ಮತ್ತು 8 ಜನರನ್ನೊಳಗೊಂಡ ಮರಣಾಂತಿಕ ವಿದ್ಯುತ್ ಅಪಘಾತಗಳ ತನಿಖೆ ನಡೆಸಿ, ಸದರಿ ಅಪಘಾತಗಳ ವರದಿಯನ್ನು ಅಪರಮುಖ್ಯ ವಿದ್ಯುತ್ ಪರಿವೀಕ್ಷಕರವರಿಗೆಸಲ್ಲಿಸುವುದು ಮತ್ತು ವಿದ್ಯುತ್ ಪರಿವೀಕ್ಷಕರವರು ಸಲ್ಲಿಸಿದ 1 ಜನರಿಗಿಂತ ಅಧಿಕ ಮತ್ತು 5 ಜನ ಮಾನವರನ್ನೊಳಗೊಂಡ ಮಾರಣಾಂತಿಕ ವಿದ್ಯುತ್ ಅಪಘಾತಗಳ, ಬೆಂಕಿ ಅಪಘಾತಗಳ ಮತ್ತು ಆನೆಗಳಿಗೆ ಸಂಭವಿಸಿದಂತಹ ಮರಣಾಂತಿಕ ವಿದ್ಯುತ್ ಅಪಘಾತಗಳ ತನಿಖಾ ವಿವರಗಳ ಆಧಾರದ ಮೇಲೆ ಅಂತಿಮ ವರದಿಗಳನ್ನು ಸರ್ಕಾರಕ್ಕೆ ಸಲ್ಲಿಸುವುದು.
4. ಮೇಲೆ ನಮೂದಿಸಿದ ಕಾರ್ಯಗಳಲ್ಲದೆ ಮುಖ್ಯ ವಿದ್ಯುತ್ ಪರಿವೀಕ್ಷಕರು, ಅಪರ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ದಕ್ಷಿಣರವರು ಸೂಚಿಸುವ ಇತರೆ ಕಾರ್ಯಗಳನ್ನು ನಿರ್ವಹಿಸುವುದು ಮತ್ತುಅಧೀನ ಕಛೇರಿ ವ್ಯಾಪ್ತಿಗೆ ಬರುವಂತಹ ಎಲ್ಲಾ ಕಾರ್ಯಗಳು ಸಮಯಕ್ಕೆ ಸರಿಯಾಗಿ, ಸಮರ್ಪಕವಾಗಿ ನಡೆಯುವ ಕುರಿತು ನಿಗಾವಹಿಸುವುದು.

3) **ಸಹಾಯಕ ವಿದ್ಯುತ್ ಪರಿವೀಕ್ಷಕರು-1& 2 (ಕಛೇರಿ):-**

ಸಹಾಯಕ ವಿದ್ಯುತ್ ಪರಿವೀಕ್ಷಕರು(ಕಛೇರಿ-1) ರವರು ಅಪರ ಮುಖ್ಯ ವಿದ್ಯುತ್ ಪರಿವೀಕ್ಷಕರರವರಿಗೆ ತಾಂತ್ರಿಕ ಸಹಾಯಕ ರಾಗಿರುತ್ತಾರೆ. ಅಪರ ಮುಖ್ಯ ವಿದ್ಯುತ್ ಪರಿವೀಕ್ಷಕರ ಕಾರ್ಯ ವ್ಯಾಪ್ತಿಯಲ್ಲಿ ಬರುವಂತಹ ಎಲ್ಲಾ ವಿಧವಾದ ವಿದ್ಯುತ್ ಸ್ಥಾವರಗಳ ನಕ್ಷೆ ಅನುಮೋದನೆ ಮತ್ತು ಚಾಲನಾ ಅನುಮೋದನೆಗಳ ಕಡತಗಳನ್ನು ಪರಿಶೀಲಿಸಿ ಟಿಪ್ಪಣಿ ಮಂಡಿಸುವುದು ಮತ್ತು ತಾಂತ್ರಿಕ ವಿಷಯಕ್ಕೆ ಸಂಭಂಧಪಟ್ಟ ಕಡತಗಳ ವಿಲೇವಾರಿಗೆ ಸೂಕ್ತ ಕ್ರಮ ಕೈಗೊಳ್ಳುವುದು ಹಾಗೂ ಅಪರ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ದಕ್ಷಿಣ ವಲಯದ ಸಾರ್ವಜನಿಕ ತಾಂತ್ರಿಕ ಮಾಹಿತಿ ಅಧಿಕಾರಿಯಾಗಿ ಕಾರ್ಯನಿರ್ವಹಿಸುವುದು.

ಸಹಾಯಕ ವಿದ್ಯುತ್ ಪರಿವೀಕ್ಷಕರು(ಕಛೇರಿ-2) ರವರು ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರರವರಿಗೆ ತಾಂತ್ರಿಕ ವಿಷಯದಲ್ಲಿ ಸಹಾಯಕರಾಗಿರುತ್ತಾರೆ. ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರ ಕಾರ್ಯ ವ್ಯಾಪ್ತಿಯಲ್ಲಿ ಬರುವಂತಹ ಎಲ್ಲಾ ವಿಧವಾದವಿದ್ಯುತ್ ಸ್ಥಾವರಗಳ ನಕ್ಷೆ ಅನುಮೋದನೆ ಮತ್ತು ಚಾಲನಾ ಅನುಮೋದನೆಗಳ ಕಡತಗಳನ್ನು ಪರಿಶೀಲಿಸಿ ಟಿಪ್ಪಣಿ ಮಂಡಿಸುವುದು ಮತ್ತು ತಾಂತ್ರಿಕ ವಿಷಯಕ್ಕೆ ಸಂಬಂಧಪಟ್ಟ ಕಡತಗಳ ವಿಲೇವಾರಿಗೆ ಸೂಕ್ತ ಕ್ರಮ ಕೈಗೊಳ್ಳುವುದು ಹಾಗೂ ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ದಕ್ಷಿಣ ವೃತ್ತಕ್ಕೆ ಸಾರ್ವಜನಿಕ ತಾಂತ್ರಿಕ ಮಾಹಿತಿ ಅಧಿಕಾರಿಯಾಗಿ ಕಾರ್ಯನಿರ್ವಹಿಸುವುದು.

**ಆಡಳಿತ ವಿಭಾಗ:**

1. **ಲೆಕ್ಕಾಧಿಕಾರಿ :**

ತೆರಿಗೆ ಪಾವತಿಗೆ ಸಂಬಂಧಿಸಿದಂತೆ, ವಲಯ ಕಛೇರಿ ಮತ್ತು ವಲಯದ ಅಧೀನ ಕಛೇರಿಗಳ ತೆರಿಗೆ ಪಾವತಿ ವಹಿಗಳ ನಿರ್ವಹಣೆ, ಬೆಸ್ಕಾಂ ವಿಭಾಗಗಳ ಲೆಕ್ಕ ಪತ್ರ ತಪಾಸಣೆ ಮಾಡುವುದು ತೆರಿಗೆ ವಿಷಯಕ್ಕೆ ಸಂಬಂಧಿಸಿದಂತೆ ಐ.ಪಿ.ಪಿ., ಸಿ.ಪಿಪಿ. ಮತ್ತು ಖಾಸಗಿ ವಿದ್ಯುತ್‌ಜನಕಗಳಿಂದ ಉತ್ಪಾದಿಸುವ / ಮಾರಾಟ ಮಾಡುವವರಿಂದ ತೆರಿಗೆ ಸಂಗ್ರಹಿಸುವುದು, ಕಚೇರಿ ಮುಖ್ಯಸ್ಥರ ಪರವಾಗಿ ರಶೀದಿಗಳಿಗೆ ಸಹಿ ಹಾಕುವುದು ವಿಧಾನ ಮಂಡಲದ ಅಧಿವೇಶನ ನಡೆದ ಸಂದರ್ಭದಲ್ಲಿ ಕೇಳಲಾಗುವ 'ಚುಕ್ಕೆ' ಗುರುತಿನ ಪ್ರಶ್ನೆಗಳಿಗೆ ಅಪರ ಮುಖ್ಯ ವಿದ್ಯುತ್ ಪರಿವೀಕ್ಷಕರ ಹಾಗೂ ಇತರ ಅಧಿಕಾರಿಗಳ ಸಲಹೆ ಪಡೆದು ಉತ್ತರ ನೀಡುವುದು ಮತ್ತು ಮಾಹಿತಿ ಹಕ್ಕು ಅಧಿನಿಯಮದಡಿಯಲ್ಲಿ ಕೇಳಲಾಗುವ ಪ್ರಶ್ನೆಗಳಿಗೆ ಉತ್ತರಿಸುವುದು ಅಲ್ಲದೇ ಕಛೇರಿ ಮುಖ್ಯಸ್ಥರ ಸಲಹೆ ಮೇರೆಗೆ ಆಡಳಿತಾತ್ಮಕ ವಿಷಯಗಳನ್ನು ನಿರ್ವಹಿಸುವುದು.

2. **ಪತ್ರಾಂಕಿತ ವ್ಯವಸ್ಥಾಪಕರು :**

ವಾರ್ಷಿಕ ಅನುದಾನ ಸಿದ್ಧಪಡಿಸುವುದು, ಕೇಂದ್ರ ಕಛೇರಿಯಿಂದ ಹಂಚಿಕೆಯಾದ ಅನುದಾನವನ್ನು ಅಧೀನ ಕಛೇರಿಗಳಿಗೆ ಮರುಹಂಚಿಕೆಗೊಳಸುವುದು, ಆಡಳಿತ ಸುಗಮವಾಗಿ ನಡೆಸಿಕೊಂಡುಹೋಗುವಂತೆ ನೋಡಿಕೊಳ್ಳುವುದು, ಕಛೇರಿ ಖರ್ಚು, ಕಂದಾಯ ಸ್ವೀಕೃತಿ ಕೆಲಸಗಳ ಪರಿಶೀಲನೆ ಮಾಡುವುದು. ಪೀಠೋಪಕರಣ ಹಾಗೂ ಲೈಬ್ರರಿ ಪುಸ್ತಕಗಳ ನಿರ್ವಹಣೆ ಮಾಡುವುದು, ಕಛೇರಿ ಮುಖ್ಯಸ್ಥರ ಸೂಚನೆ ಮೇರೆಗೆ ಇನ್ನಿತರ ಆಡಳಿತಾತ್ಮಕ ಕೆಲಸ ನಿರ್ವಹಿಸಿಕೊಂಡು ಹೋಗುವುದು. ವಿದ್ಯುತ್ ತೆರಿಗೆ ಪಾವತಿಗೆ ಸಂಬಂಧಪಟ್ಟ ಲೆಕ್ಕ ತಪಾಸಣೆ ಮತ್ತು ತೆರಿಗೆ ಪಾವತಿಗೆ ಸಂಬಂಧಿಸಿದ ಲೆಕ್ಕ ಪತ್ರಗಳು, ದಾಖಲಾತಿಗಳುಹಾಗೂ ತೆರಿಗೆಗೆ ಸಂಬಂಧಪಟ್ಟ ಕಡತಗಳ ನಿರ್ವಹಣೆ ಮಾಡುವುದು. ತೆರಿಗೆಗಳಿಗೆ ಸಂಬಂಧಿಸಿದಂತೆ ಕೋರ್ಟ್ ಕೆಲಸ ನಿರ್ವಹಿಸುವುದು ಅಧೀನ ಕಚೇರಿಗಳ ಆಂತರಿಕ ಲೆಕ್ಕ ಪತ್ರಗಳ ಪರಿಶೋಧನೆ ಮತ್ತು ತೆರಿಗೆ ವಸೂಲಾತಿ ಬಗ್ಗೆ ಮುತುವರ್ಜಿ ವಹಿಸುವುದು.ಅಪರ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ದಕ್ಷಿಣ ವಲಯದ ಕಛೇರಿ ಆಡಳಿತ ವಿವರಗಳ ಮಾಹಿತಿ ಅಧಿಕಾರಿಯಾಗಿ ಕಾರ್ಯನಿರ್ವಹಿಸುವುದು.

3. **ಅಧೀಕ್ಷಕರು –1 & 2:**

ಹಾಜರಾತಿ ಪುಸ್ತಕದ ನಿರ್ವಹಣೆ, ಕಛೇರಿ ಖರ್ಚಿನ ವರದಿ, (62-ಬಿ) 0043 ಕಂದಾಯ ಚಲನ್ ವರದಿಯ ನಿರ್ವಹಣೆ ಅಧಿಕಾರಿಗಳ ಹಾಗೂ ಸಿಬ್ಬಂದಿಯವರ ಸೇವಾ ಪುಸ್ತಕ ನಿರ್ವಹಣೆ, ಹೆಚ್. ಆರ್. ಎಂ.ಎಸ್. ಮೂಲಕ ಅಧಿಕಾರಿಗಳ/ ಸಿಬ್ಬಂದಿ ವೇತನ ಬಿಲ್ ಇತರೆ ಬಿಲ್ಲುಗಳ ತಯಾರಿಕೆ, ಹಾಗೂ ಅನುದಾನ ಹಂಚಿಕೆ ಹಾಗೂ ಆಡಳಿತಾತ್ಮಕ ವಿಷಯಗಳಲ್ಲಿ ವ್ಯವಸ್ಥಾಪಕರಿಗೆ ಸಹಕರಿಸುವುದು. ಆದಾಯ ತೆರಿಗೆ, ಟಿ.ಡಿ.ಎಸ್ ಪೈಲ್ ಮಾಡುವುದು. ಮಾಹಿತಿ ಹಕ್ಕು ಅಧಿನಿಯಮಕ್ಕೆ ಸಂಬಂಧಪಟ್ಟಂತೆ ಕಡತಗಳನ್ನು ನಿರ್ವಹಿಸುವುದು. ಆಡಳಿತ. ಅಕೌಂಟೆಂಟ್ ಜನರಲ್‌ರವರ ಲೆಕ್ಕ ತಪಾಸಣೆಗೆ ಉತ್ತರಿಸುವುದು. ಕಛೇರಿಯ ದಾಖಲೆಗಳ ಮೇಲ್ವಿಚಾರಣೆ ಮತ್ತು ನಿರ್ವಹಣೆ. ಅಪರ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ದಕ್ಷಿಣ ವಲಯದ ಕಛೇರಿ ಆಡಳಿತ ವಿವರಗಳಸಹಾಯಕ ಮಾಹಿತಿ ಅಧಿಕಾರಿಯಾಗಿ ಕಾರ್ಯನಿರ್ವಹಿಸುವುದು

4. **ಪ್ರಥಮ ದರ್ಜೆ ಸಹಾಯಕರು :**

ಅಧಿಕಾರಿಗಳ / ಸಿಬ್ಬಂದಿಗಳ ವೇತನದ ರಿಜಿಸ್ಟರ್ ನಿರ್ವಹಣೆ ಮತ್ತು ತಯಾರಿಕೆ, ಸಿಬ್ಬಂದಿಗಳ ರಜೆ ಲೆಕ್ಕ ಇಡುವುದು, ಗಳಿಕೆ ರಜೆ ನಗದೀಕರಣ ಬಿಲ್ಲು ಸಿದ್ಧಪಡಿಸುವುದು, ರಶೀದಿಪುಸ್ತಕ, ನಗದು ಪುಸ್ತಕ, ಸಾದಿಲ್ವಾರು ಬಿಲ್ಲು ಸಿದ್ಧಪಡಿಸುವುದು ಮತ್ತು ಆರ್.ಸಿ.ಬಿ. ನಿರ್ವಹಣೆ, 0043 ಅಡಿಯಲ್ಲಿ ಸಂಗ್ರಹಣೆಯಾದ ಕಂದಾಯವನ್ನು ಬ್ಯಾಂಕಿಗೆ ಜಮಾ ಮಾಡುವುದು 0043 ಚಲನ್ ವರದಿ ಮತ್ತು ಆರ್.ಸಿ.ಬಿ. ವರದಿ ಸಿದ್ಧಪಡಿಸುವುದು, ಅಧೀನ ಕಚೇರಿಗಳಿಂದ ಬಂದ ಸಾದಿಲ್ವಾರು ಬಿಲ್ಲುಗಳನ್ನು ಮೇಲುರುಜುಗೊಳಿಸುವ ಕೆಲಸದಲ್ಲಿ ಅಧೀಕ್ಷಕರಿಗೆ ನೆರವಾಗುವುದು. ರಶೀದಿ ಪುಸ್ತಕವನ್ನು ರಿಜಿಸ್ಟರ್‌ಗಳ ನಿರ್ವಹಣೆ, 0043 ಚಲನ್ ವರದಿ ಹಾಗೂ ಆರ್.ಸಿ.ಬಿ. ವರದಿ ಸಿದ್ಧಪಡಿಸುವುದು, ಇನ್ನಿತರ ಕಚೇರಿಯ ಆಡಳಿತಾತ್ಮಕ ಕೆಲಸಗಳ ನಿರ್ವಹಣೆ.

5. **ಶೀಘ್ರಲಿಪಿಗಾರರು/ಕಂಪ್ಯೂಟರ್ ಆಪರೇಟರ್:**

ಅಪರ ಮುಖ್ಯ ವಿದ್ಯುತ್ ಪರಿವೀಕ್ಷಕರ ಆಪ್ತ ಸಹಾಯಕರಾಗಿ ಕಚೇರಿ ಕೆಲಸ ಕಾರ್ಯಗಳು ನಿರ್ವಹಿಸುವುದು ಹಾಗೂ ಇತರೆ ಅಧಿಕಾರಿಗಳು ಸೂಚಿಸುವ ಕೆಲಸ ಕಾಯಗಳು ಮತ್ತು ಅಪರ ಮುಖ್ಯ ವಿದ್ಯುತ್ ಪರಿವೀಕ್ಷಕರಿಗೆ ಬರುವ ಪತ್ರ ಮತ್ತು ಕಡತಗಳ ಚಲನವಲನಗಳನ್ನು ನಿರ್ವ್ರಹಿಸುವುದು. ಕಚೇರಿಯ ಎಲ್ಲಾ ಕಾಗದ ಪತ್ರಗಳನ್ನು ಬೆರಳಚ್ಚು ಮಾಡುವುದು.

6. **ದ್ವಿತೀಯ ದರ್ಜೆ ಸಹಾಯಕರು:**

ಸ್ವೀಕೃತಿ ಮತ್ತು ರವಾನೆ ರಿಜಿಸ್ಟರ್ ಸ್ಟಾಂಪ್ ಲೆಕ್ಕ ಪತ್ರ ರಿಜಿಸ್ಟರ್ ನಿರ್ವಹಣೆ– ಪತ್ರಗಳನ್ನು ದಾಖಲಿಸುವುದು ಹಾಗೂ ರವಾನಿಸುವುದು ತಾಂತ್ರಿಕ / ತಾಂತ್ರಿಕೇತರ ಕಡತಗಳ ನಿರ್ವಹಣೆ, ವಿದ್ಯುತ್ ತೆರಿಗೆ 'ಜಿ' ಯ ರಿಜಿಸ್ಟರ್ ನಿರ್ವಹಣೆ, ಚಲನ ವಲನ ರಿಜಿಸ್ಟರ್ ನಿರ್ವಹಣೆ, ಕಚೇರಿ ಮುಖ್ಯಸ್ಥರ ಸಲಹೆ ಮೇರೆಗೆ ಇನ್ನಿತರ ಅಡಳಿತಾತ್ಮಕ ಕಾರ್ಯ ನಿರ್ವಹಿಸುವುದು.

7. **ಗ್ರೂಪ್ ಡಿ ನೌಕರರು:** ಕಚೇರಿ ಮುಖ್ಯಸ್ಥರು ಸೂಚಿಸುವ ಕೆಲಸಗಳನ್ನು ನಿರ್ವಹಿಸುವುದು.

8. **ಹೆಲ್ಪರ್:** ಕಚೇರಿ ಮುಖ್ಯಸ್ಥರು ಸೂಚಿಸುವ ಕೆಲಸಗಳನ್ನು ನಿರ್ವಹಿಸುವುದು.

9. **ವಾಹನ ಚಾಲಕರು:** ಕಚೇರಿ ಮುಖ್ಯಸ್ಥರು ಸೂಚಿಸುವ ಕೆಲಸಗಳನ್ನು ನಿರ್ವಹಿಸುವುದು.

ಅ. ಇಲಾಖಾ ಕಾರ್ಯ ನಿರ್ವಹಿಸುವುದಕ್ಕೆ ಬಳಸುವ ನಿಯಮಗಳು ಅನುಸೂಚಿಗಳು, ಕೈಪಿಡಿ ಮತ್ತು ದಾಖಲೆಗಳು

1) ಕೆ.ಸಿ.ಎಸ್.ಆರ್ – 1958.
2) ಕೆ.ಎಫ್.ಸಿ– 1958,
3) ಕೆ.ಟಿ.ಸಿ.
4) ಆಯ ವ್ಯಯ ಕೈಪಿಡಿ.
5) ಕಚೇರಿ ಕಾರ್ಯ ವಿಧಾನ ಕೈಪಿಡಿ.
6) ಕೆ.ಸಿ.ಎಸ್ (ಸಾಮಾನ್ಯ ನೇಮಕಾತಿ) 1977.
7) ಕೆ.ಸಿ.ಎಸ್ (ಪ್ರೋಬೇಷನ್) 1977.
8) ಕೆ.ಸಿ.ಎಸ್ (ಸಿಸಿಎ) ನಿಯಮಗಳು– 1957.
9) ಕೆ.ಸಿ.ಎಸ್ (ಕಾಂಡಕ್ಟ್) ನಿಯಮಗಳು– 1966.
10 ಕೆ.ಸಿಎಸ್ (ಜೇಷ್ಠತಾ) ನಿಯಮಗಳು.
11) ಕೆ.ಸಿ.ಎಸ್ (ಪಿಪಿಪಿ) ಆಕ್ಟ್ 1973 ಮತ್ತು ನಿಯಮಗಳು– 1978.
12) ಕೇಂದ್ರಿಯ ವಿದ್ಯುಚ್ಛಕ್ತಿ ಪ್ರಾಧಿಕಾರ (ಸುರಕ್ಷತಾ ಹಾಗೂವಿದ್ಯುತ್ ಪೂರೈಕೆಗೆ ಸಂಬಂಧಿಸಿದ) ನಿಬಂಧನೆಗಳು, 2010.
13) ಭಾರತೀಯ ವಿದ್ಯುತ್ ಕಾಯ್ದೆ – 2003.
14) ಕರ್ನಾಟಕ ಸಿನಿಮ (ನಿಯಂತ್ರಣ) ಕಾಯ್ದೆ 1964 ಮತ್ತು ನಿಯಮಗಳು 2014.
15) ಕರ್ನಾಟಕ ಲಿಫ್ಟ್ ಕಾಯ್ದೆ ಮತ್ತು ನಿಯಮಗಳು – 2015.
16) ಕರ್ನಾಟಕ ಎಕ್ಷಿಬಿಷನ್ ಆನ್ ಟಿವಿ ತ್ರೂ ವಿಸಿಆರ್ ಆರ್ ಲೇಸರ್ ಡಿಸ್ಕ್ ( ನಿಯಂತ್ರಣ)ನಿಯಮಗಳು– 1984.
17) ಕರ್ನಾಟಕ ವಿದ್ಯುಚ್ಛಕ್ತಿ ಬಳಕೆ ಮತ್ತು ಮಾರಾಟದ ಮೇಲಿನ ತೆರಿಗೆ ಕಾಯ್ದೆ 1959 ಮತ್ತು ನಿಯಮಗಳು– 2014.
18) ನ್ಯಾಷನಲ್ ಎಲೆಕ್ಟ್ರಿಸಿಟಿ ಕೋಡ್ – 1985.
19) ಕಚೇರಿ ಕೈಪಿಡಿ.

ಆಡಳಿತಕ್ಕೆ ಸಂಬಂಧಪಟ್ಟಂತೆ ನಿರ್ವಹಿಸಿರುವ ರಿಜಿಸ್ಟರುಗಳು ಮತ್ತು ಕಡತಗಳು:

1. ಸೇವಾ ಪುಸ್ತಕಗಳು ಹಾಗೂ ವೇತನ ರಿಜಿಸ್ಟರ್‌ಗಳು.
2. ವೇತನ ಸೆಳೆತ : ಸಾಲ ವಸೂಲಿ ಮುಂಗಡಗಳು ಇದಕ್ಕೆ ಸಂಬಂಧಪಟ್ಟ ರಿಜಿಸ್ಟರುಗಳು.
3. ವೇತನ ಬಟವಾಡೆ ಹಾಗೂ ಪ್ರವಾಸ ಭತ್ಯೆ ಹಣ ಬಟವಾಡೆ ಪುಸ್ತಕ.
4. ಬಿಲ್ ರಿಜಿಸ್ಟರ್‌ಗಳು.
5. ಗಳಿಕೆ ರಜೆ ನಗದೀಕರಣ ಮತ್ತು ರಜಾ ಮಂಜೂರಾತಿ ರಿಜಿಸ್ಟರ್.
6. ಆಡಳಿತ ಮತ್ತು ಕೋರ್ಟ್ ಕೇಸ್ ಫೈಲ್.
7. ಅನುದಾನ ಅಂದಾಜು ಮತ್ತು ಅನುದಾನ ಹಂಚಿಕೆ ರಿಜಿಸ್ಟರ್‌ಗಳು.
8. ಕಚೇರಿ ವೆಚ್ಚ ರಿಜಿಸ್ಟರ್‌ಗಳು.
9. ಆಡಳಿತ ವಿಷಯಕ್ಕೆ ಸಂಬಂಧಪಟ್ಟ ಕಡತಗಳು.
10. ವೈದ್ಯಕೀಯ ವೆಚ್ಚ ಮರುಪಾವತಿ ಕಡತಗಳು.
11. ಸ್ವೀಕೃತಿ ರವಾನೆ ರಿಜಿಸ್ಟರ್‌ಗಳು.
12. ಸ್ಟಾಂಪ್ ಅಕೌಂಟ್ಸ್ ರಿಜಿಸ್ಟರ್‌ಗಳು.
13. ಸಾಮಾನ್ಯ ಆತಳತಾತ್ಮಕ ಸುತ್ತೋಲೆಗಳ ಕಡತ.
14. ಕೋರ್ಟ್ ಕೇಸ್ ಕಡತ.
15. ಆರ್. ಸಿ. ಬಿ ಫೈಲ್.
16. ನಗದು ಪುಸ್ತಕ ಮತ್ತು ರಶೀದಿ ಪುಸ್ತಕಗಳು.
17. ಡಿ.ಡಿ./ ಚೆಕ್ಕುಗಳನ್ನು ಬ್ಯಾಂಕಿಗೆ ಸಂದಾಯ ಮಾಡುವ ರಿಜಿಸ್ಟರ್‌ಗಳು.
18. ಖಾಯಂ ಮುಂಗಡ ರಿಜಿಸ್ಟರುಗಳು.
19. ಪೀಠೋಪಕರಣ ಹಾಗೂ ಲೈಬ್ರರಿ ಪುಸ್ತಕಗಳ ರಿಜಿಸ್ಟರ್‌ಗಳು.
20. ಸಾದಿಲ್ವಾರು ಬಿಲ್ಲುಗಳ ಕಡತಗಳು.
21. ಆರ್.ಟಿ.ಐ. ಕಡತ ಮತ್ತು ರಿಜಿಸ್ಟರ್‌ಗಳು.
22. ಹಾಜರಾತಿ ಪುಸ್ತಕಗಳು.
23. ಚಲನ ವಲನ ರಿಜಿಸ್ಟರ್‌ಗಳು.
24. ನಗದು ಘೋಷಣ ರಿಜಿಸ್ಟರ್‌ಗಳು.

25. ಕಚೇರಿ ಆದೇಶ ಪುಸ್ತಕಗಳು.

26. ಬಿಲ್ ರಿಜಿಸ್ಟರ್‌ಗಳು.

III. **ಮೇಲ್ವಿಚಾರಣೆ ಮತ್ತು ಹೊಣೆಗಾರಿಕೆಯ ಮಾರ್ಗಗಳು ಸೇರಿದಂತೆ ತೀರ್ಮಾನ ತೆಗೆದುಕೊಳ್ಳುವ ಪ್ರಕ್ರಿಯೆಗಳಲ್ಲಿ ಅನುಸರಿಸಬೇಕಾದ ಕಾರ್ಯ ವಿಧಾನ:** –

ಇಲಾಖೆಯ ವಲಯ, ವಿಭಾಗ, ಉಪ ವಿಭಾಗ ಕಚೇರಿಗಳಲ್ಲಿ ಸಲ್ಲಿಕೆಯಾಗುವ ಅರ್ಜಿಗಳನ್ನು ಸಂಬಂಧಿಸಿದ ಅಧಿಕಾರಿಗಳು ನೀಲಿ ನಕ್ಷೆ ಪರಿಶೀಲಿಸುತ್ತಾರೆ, ನ್ಯೂನ್ಯತೆಗಳನ್ನು ಗ್ರಾಹಕರಿಗೆ ತಿಳಿಸಿ ಸರಿಪಡಿಸಿದ ನಕ್ಷೆಗಳನ್ನು ಅನುಮೋದನೆ ಮಾಡುತ್ತಾರೆ. ಗ್ರಾಹಕರಿಂದ ಸಮಾಪನಾ ವರದಿ ಸ್ವೀಕೃತಗೊಂಡನಂತರ, ಪ್ರಥಮ ಪರಿವೀಕ್ಷಣೆ ನೆಡೆಸಿ ಮುಂದಿನ ಕ್ರಮಕ್ಕೈಗೊಳ್ಳಲಾಗುತ್ತದೆ.

IV. **ಇಲಾಖಾ ಕಾರ್ಯಗಳ ನಿರ್ವಹಣೆಗೆ ರೂಪಿಸಿರುವ ಸೂತ್ರಗಳು:**–

ವಿದ್ಯುತ್ ಪರಿವೀಕ್ಷಣಾಲಯ ಇಲಾಖೆಯು ತನ್ನ ಕಚೇರಿಯ ಕೆಲಸ ಸೂಸೂತ್ರವಾಗಿ ನಿರ್ವಹಿಸಲು ಪರಿವೀಕ್ಷಣಾ ಕೈಪಿಡಿ (ಮ್ಯಾನ್ಯುಯಲ್) –1987, ವಿದ್ಯುತ್ ಬಳಕೆ ಮೇಲಿನ ತೆರಿಗೆ ಕೈಪಿಡಿ, ಲಿಫ್ಟ್ ನಿಯಮಗಳು ಕೈಪಿಡಿಗಳನ್ನು ಮತ್ತು ಕರ್ನಾಟಕ ಸರ್ಕಾರದಿಂದ ಸೃಜನೆಗೊಂಡ ಕಛೇರಿ ನಿಯಮಗಳನ್ನು ಪಾಲಿಸಲಾಗಿರುತ್ತದೆ.

V. **ಇಲಾಖೆಯು ಹೊಂದಿರುವ ದಸ್ತಾವೇಜುಗಳ ಪ್ರವರ್ಗಗಳ ವಿವರ ಪಟ್ಟಿ:**–

ಅ) ಸೇವಾ ಪುಸ್ತಕಗಳು ಮತ್ತು ಬಡ್ತಿ ವಹಿ.
ಆ) ವೇತನ ವಹಿ.
ಇ) ಪೇ ಮತ್ತು ಪ್ರಯಾಣ ಭತ್ಯೆ ವಹಿ.
ಈ) ಬಿಲ್ ವಹಿ.
ಉ) ಗಳಿಕೆ ರಜೆ ನಗದಿಕರಣ ಮತ್ತು ರಜೆ ಮಂಜೂರಾತಿ ವಹಿ.
ಋ) ಸಾದಿಲ್ವಾರು ವಹಿ
ಎ) ಸ್ವೀಕೃತಿ ಮತ್ತು ರವಾನೆ ವಹಿ.
ಏ) ಸಾಮಾನ್ಯ ಆದೇಶ ಮತ್ತು ಸುತ್ತೋಲೆಗಳು.
ಅ) ನ್ಯಾಯಾಲಯ ವ್ಯಾಜ್ಯ ಕಡತ.
ಆ) ನಗದು ಪುಸ್ತಕ ಮತ್ತು ನಗದು ಪಾವತಿ ಪುಸ್ತಕ.
ಇ) ಡಿ.ಡಿ. ಚೆಕ್ ಮತ್ತು ಹಣ ರವಾನೆ ವಹಿ.
ಈ) ಮುಂಗಡ ಹಣ ಪಾವತಿ ವಹಿ.
ಉ) ಕಚೇರಿ ಕರ್ಚು ವೆಚ್ಚದ ಕ್ರೋಡಿಕೃತ 2045 ರಿಜಿಸ್ಟರ್.
ಊ) ಐಪಿಪಿ ಗಳ ವಿದ್ಯುತ್ ಉತ್ಪಾದನಾ ವಿವರಗಳ ವಹಿ.

16. **ಮ್ಯಾನ್ಯುಯಲ್ ವಿಭಾಗ:**–

ಅ) ವಿದ್ಯುತ್ ಸ್ಥಾವರಗಳ ಅಂಕಿ ಅಂಶಗಳ ವಿವರಗಳು.
ಆ) ಲಿಫ್ಟ್ ಸ್ಥಾಪನಾ ಪರವಾನಗಿ ಮತ್ತು ಅನುಮೋದನೆ ರಿಜಿಸ್ಟರ್‌ಗಳು.
ಇ) ವಿದ್ಯುತ್ ಅಪಘಾತಗಳ ಅಂಕಿ ಅಂಶಗಳ ರಿಜಿಸ್ಟರ್‌ಗಳು.
ಈ) ಕಚೇರಿ ಗಣಕ ಯಂತ್ರಗಳ ರಿಜಿಸ್ಟರ್‌ಗಳು.
ಉ) ಪ್ರಗತಿ ಪರಿಶೀಲನಾ ಸಭೆಗಳ ರಿಜಿಸ್ಟರ್‌ಗಳು.
ಊ) ಸಾಮಾನ್ಯ ಪತ್ರ ವ್ಯವಹಾರಗಳ ರಿಜಿಸ್ಟರ್‌ಗಳು.
ಋ) ತಂತ್ರಿಕ ಸುತ್ತೋಲೆಗಳ ರಿಜಿಸ್ಟರ್‌ಗಳು.

**ತಾಂತ್ರಿಕ ವಿಭಾಗ:**–

ಎ) ನೀಲಿ ನಕ್ಷೆ ಅನುಮೋದನೆ ರಿಜಿಸ್ಟರ್‌ಗಳು.
ಬಿ) ಚಾಲನಾ ಅನುಮೋದನೇ ರಿಜಿಸ್ಟರ್‌ಗಳು.
ಸಿ) ವಾರ್ಷಿಕ ಮಾಹಿತಿ ಹಕ್ಕು ರಿರ್ಟನ್‌ಗಳು – (ಫಾರ್ಮ 1, 2, 3).
ಡಿ) ವಿದ್ಯುತ್ ಅಪಘಾತಗಳ ಪತ್ರ ವ್ಯವಹಾರಗಳ ಮತ್ತು ಸುತ್ತೋಲೆಗಳ ರಿಜಿಸ್ಟರ್‌ಗಳು.
ಇ) ತಾಂತ್ರಿಕ ಪತ್ರ ವ್ಯವಹಾರಗಳ ಮತ್ತು ಸುತ್ತೋಲೆಗಳ ರಿಜಿಸ್ಟರ್‌ಗಳು.

VI. **ಇಲಾಖೆಯ ಕಾರ್ಯನೀತಿಯ ರಚನೆ ಅಥವಾ ಅದರ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರೊಡನೆ ಸಮಾಲೋಚಿಸಲು ಅಥವಾ ಅವರ ಪ್ರಾತಿನಿಧ್ಯವಿರುವಂತೆ ಮಾಡಲು ಇರುವಂಥ ವ್ಯವಸ್ಥೆಯ ವಿವರಗಳು**

**– ಈ ಕಚೇರಿಗೆ ಅನ್ವಯಿಸುವುದಿಲ್ಲ.**

**VII. ಮಂಡಳಿಗಳು, ಪರಿಷತ್ತುಗಳು ಸಮಿತಿಗಳು ಅಥವಾ ಇತರ ನಿಕಾಯಗಳು ಮತ್ತು ಅದರ ಭಾಗವಾಗಿ ಅಥವಾ ಅದರ ಸಲಹೆಯ ಉದ್ದೇಶಕ್ಕಾಗಿ ರಚಿತವಾದ ಇಬ್ಬರು ಅಥವಾ ಹೆಚ್ಚು ವ್ಯಕ್ತಿಗಳನ್ನೊಳಗೊಂಡ ಮಂಡಳಿಗಳ ಪರಿಷತ್ತುಗಳ, ಸಮಿತಿಗಳ ಮತ್ತು ಇತರ ನಿಕಾಯಗಳ ಸಭೆಗಳು ಸಾರ್ವಜನಿಕರಿಗೆ ಮುಕ್ತವಾಗಿರುತ್ತವೆಯೇ ಅಥವಾ ಅಂತಹ ಸಭೆಗಳ ನಡಾವಳಿಗಳು ಸಾರ್ವಜನಿಕರಿಗೆ**

ದೊರೆಯುತ್ತವೆಯೇ ಎಂಬುದರ ವಿವರ ಪಟ್ಟಿ

– ಈ ಕಚೇರಿಗೆ ಅನ್ವಯಿಸುವುದಿಲ್ಲ

## VIII. ಅಧಿಕಾರಿಗಳು ಮತ್ತು ನೌಕರರ ನಿರ್ದೇಶಿಕೆ:–

| ಕ್ರಮ ಸಂಖ್ಯೆ: | ಹುದ್ದೆಯ ವಿಭಾಗ | ಹೆಸರು ಶ್ರೀಯುತ/ಶ್ರೀಮತಿ | ದೂರವಾಣಿ: |
|---|---|---|---|
| 1) | ಅಪರ ಮುಖ್ಯ ವಿದ್ಯುತ್ ಪರಿವೀಕ್ಷಕರು, | ತೀತಿರಾ. ಎನ್.ಅಪ್ಪಚ್ಚು | 080-26608675 |
| 2) | ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು | ಬಿ.ಸುಬ್ರಮಣ್ಯ | 080-26608683 |
| 3) | ಸಹಾಯಕ ವಿದ್ಯುತ್ ಪರಿವೀಕ್ಷಕರು (ಕ್ಷೇತ್ರೀಯ) | ಮಲ್ಲಿಕಾರ್ಜುನ ಹೊಸಮನಿ | 080-26608675 |
| 4) | ಸಹಾಯಕ ವಿದ್ಯುತ್ ಪರಿವೀಕ್ಷಕರು-2 ಕಚೇರಿ | ವಿಘ್ನೇಶ್ | 080-26608675 |
| 5) | ಲೆಕ್ಕಾಧಿಕಾರಿಗಳು | ಖಾಲಿ ಇದೆ. | 080-26608675 |
| 6) | ಪತ್ರಾಂಕಿತ ವ್ಯವಸ್ಥಾಪಕರು | ಸಿ.ಕೆ ಯಶೋಧ | 080-26608675 |
| 7) | ಅಧೀಕ್ಷಕರು-1 | ರೇಖಾ. ಎನ್. | 080-26608675 |
| 8) | ಅಧೀಕ್ಷಕರು-2 | ಹೆಚ್.ವಿ.ಚಂದ್ರಮೋಹನ್ | |
| 9) | ಪ್ರ ದ ಸ-1 ಹುದ್ದೆ | ಖಾಲಿ | |
| 10) | ಪ್ರ ದ ಸ-2 ಹುದ್ದೆ | ಖಾಲಿ | |
| 11) | ಬೆರಳಚ್ಚುಗಾರರು/ಶೀಘ್ರ ಲಿಪಿಕಾರರು | ಖಾಲಿ | |
| 12) | ದ್ವಿ ದ ಸ-1, | ಎಸ್,ಸುಬ್ರಮಣ್ಯಂ | |
| 13) | ದ್ವಿ.ದ.ಸ-2 | ಶಿವರಾಜ್. ಎಂ.ಪುರದ್ | ---------- |
| 14) | ವಾಹನ ಚಾಲಕ | ಖಾಲಿ | |
| 15) | ಸಹಾಯಕರು | ಖಾಲಿ | ---------- |
| 16) | ಗ್ರೂಪ್ 'ಡಿ' ಜವಾನ | ಚಂದನ್ | ---------- |
| ಈ ಕಚೇರಿಗೆ ಮಂಜೂರಾದ ಶೀಘ್ರಲಿಪಿಕಾರರ ಹುದ್ದೆ ಖಾಲಿ ಇರುವುದರಿಂದ ಸದರಿ ಹುದ್ದೆಯನ್ನು ಕಂಪ್ಯೂಟರ್ ಆಪರೇಟರ್ ಹುದ್ದೆಯಿಂದ ಭರಿಸಲಾಗಿದೆ. | | | |

## IX. ಇಲಾಖೆಯ ನಿಯಮನಗಳಲ್ಲಿ ಉಪಬಂಧಿಸಿದಂತೆ ಪರಿಹಾರದ ವ್ಯವಸ್ಥೆಯೂ ಸೇರಿದಂತೆ ಅದರ ಪ್ರತಿಯೊಬ್ಬ ಅಧಿಕಾರಿ ಮತ್ತು ನೌಕರರು ಪಡೆಯುವ ತಿಂಗಳ ಗೌರವಧನ :-

| ಕ್ರಮ ಸಂಖ್ಯೆ: | ಹುದ್ದೆಯ ಹೆಸರು | ಮಂಜೂರಾದ ಸಿಬ್ಬಂದಿ | ವೇತನ ಶ್ರೇಣಿ |
|---|---|---|---|
| 1 | ಅಪರ ಮುಖ್ಯ ವಿದ್ಯುತ್ ಪರಿವೀಕ್ಷಕರು | 01 | 82000-117700 |
| 2 | ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು | 01 | 74400-109600 |
| 3 | ಲೆಕ್ಕಾಧಿಕಾರಿ | 01 | 52650-97100 |
| 4 | ಸಹಾಯಕ ವಿದ್ಯುತ್ ಪರಿವೀಕ್ಷಕರು | 02 | 43100-83900 |
| 5 | ವ್ಯವಸ್ಥಾಪಕರು | 01 | 40900-78200 |
| 6 | ಅಧೀಕ್ಷಕರು | 02 | 37900-70850 |
| 7 | ಶೀಘ್ರಲಿಪಿಕಾರರು | 01 | 27650-52650 |
| 8 | ಪ್ರ ದ ಸ | 02 | 27650- 52650 |
| 9 | ದ್ವಿ ದ ಸ | 02 | 21400 – 42000 |
| 10 | ವಾಹನ ಚಾಲಕರು | 01 | 21400- 42000 |

| | | | |
|---|---|---|---|
| 11 | ಸಹಾಯಕರು | 01 | 17000- 28950 |
| 12 | ಗ್ರೂಪ್ 'ಡಿ' ಜವಾನ | 01 | 17000 – 28950 |
| ಒಟ್ಟು | | 16 | |

**X. ಎಲ್ಲಾ ಯೋಜನೆಗಳ ವಿವರಗಳನ್ನು ಸೂಚಿಸುವ ಪ್ರಸ್ತಾವಿತ ವೆಚ್ಚಗಳನ್ನು ಮತ್ತು ಮಾಡಲಾದ ಬಟವಾಡೆಗಳ ವರದಿಯನ್ನು ಸೂಚಿಸಿ ಅದರ ಪ್ರತಿಯೊಂದು ಏಜೆನ್ಸಿಗೆ ಹಂಚಿಕೆ ಮಾಡಲಾದ ಆಯವ್ಯಯ:**

– ಈ ಇಲಾಖೆಗೆ ಅನ್ವಯಿಸುವುದಿಲ್ಲ

**XI. ಹಂಚಿಕೆ ಮಾಡಲಾದ ಮೊಬಲಗನ್ನೊಳಗೊಂಡು ಸಹಾಯಧನ ಕಾರ್ಯಕ್ರಮಗಳ ಜಾರಿಯ ವಿಧಾನವನ್ನು ಮತ್ತು ಅಂತಹ ಕಾರ್ಯಕ್ರಮಗಳ ಫಲಾನುಭವಿಗಳ ವಿವರ**

– ಈ ಇಲಾಖೆಗೆ ಸಂಬಂಧಿಸಿರುವುದಿಲ್ಲ

**XII. ನೀಡಿರುವ ರಿಯಾಯತಿಗಳನ್ನು ಅನುಮತಿ ಪತ್ರಗಳನ್ನು ಅಥವಾ ಅಧಿಕಾರ ಪತ್ರಗಳನ್ನು ಪಡೆಯುವವರ ವಿವರ : --**

– ಈ ಇಲಾಖೆಗೆ ಅನ್ವಯಿಸುವುದಿಲ್ಲ

**XIII. ಕಛೇರಿಯ ಬಳಿ ಲಭ್ಯವಿರುವ ಅಥವಾ ಅದು ಹೊಂದಿರುವ ವಿದ್ಯುನ್ಮಾನ ರೂಪಕ್ಕೆ ಪರಿವರ್ತಿಸಿರುವ, ಮಾಹಿತಿಗೆ ಸಂಬಂಧಿಸಿದ ವಿವರ: --**

– ಈ ಇಲಾಖೆಗೆ ಅನ್ವಯಿಸುವುದಿಲ್ಲ

**XIV. ಸಾರ್ವಜನಿಕ ಉಪಯೋಗಕ್ಕಾಗಿ ಗ್ರಂಥಾಲಯವನ್ನು ಅಥವಾ ವಾಚನಾಲಯವನ್ನು ನಿರ್ವಹಿಸುತ್ತಿದ್ದಲ್ಲಿ ಅದರ ಕೆಲಸದ ಸಮಯವನ್ನೊಳಗೊಂಡ ಮಾಹಿತಿ ಪಡೆಯಲು ಸಾರ್ವಜನಿಕರಿಗೆ ಲಭ್ಯವಿರುವ ಸೌಲಭ್ಯಗಳ ವಿವರ:--**

– ಈ ಇಲಾಖೆಗೆ ಸಂಬಂಧಿಸಿರುವುದಿಲ್ಲ.

**XV. ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರುಗಳು, ಪದನಾಮಗಳು ಮತ್ತು ಇತರ ವಿವರನಿಯಮಿಸಬಹುದಾದಂತಹ ಇತರ ಮಾಹಿತಿಯನ್ನು ಪ್ರಕಟಿಸತಕ್ಕದ್ದು ಮತ್ತು ಆ ತರುವಾಯ ಪ್ರತಿ ವರ್ಷ ಈ ಪ್ರಕಟಣೆಗಳನ್ನು ಅಂದಿನವರೆಗೆ ಪರಿಷ್ಕರಿಸತಕ್ಕದ್ದು.**

| ಕ್ರಮ ಸಂಖ್ಯೆ | ಅಧಿಕಾರಿಗಳ ಹೆಸರು | ಅಧಿಕಾರಿಗಳ ಪದನಾಮ | ಮಾಹಿತಿ ಹಕ್ಕು 2005 ರ ಪ್ರಕಾರ ಹುದ್ದೆ | ದೂರವಾಣಿ |
|---|---|---|---|---|
| 1 | ತೀತಿರಾ. ಎನ್.ಅಪ್ಪಚ್ಚು | ಅಪರ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ದಕ್ಷಿಣ | ಬೆಂಗಳೂರು ದಕ್ಷಿಣ ವಲಯದ ಅಪೀಲು ಅಧಿಕಾರಿ | 080-26608675 |
| 2 | ಮಲ್ಲಿಕಾರ್ಜುನ ಹೊಸಮನಿ | ಸಹಾಯಕ ವಿದ್ಯುತ್ ಪರಿವೀಕ್ಷಕರು-1 (ಕ್ಷೇತ್ರೀಯ) | ಸಾರ್ವಜನಿಕ ಮಾಹಿತಿಅಧಿಕಾರಿ (ಅಪರ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ದಕ್ಷಿಣ ವಲಯದ ತಾಂತ್ರಿಕ ಮಾಹಿತಿ). | 080-26608675 |
| 3 | ವಿಘ್ನೇಶ್ | ಸಹಾಯಕ ವಿದ್ಯುತ್ ಪರಿವೀಕ್ಷಕರು-2 ಕಚೇರಿ | ಸಾರ್ವಜನಿಕ ಮಾಹಿತಿ ಅಧಿಕಾರಿ, (ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ದಕ್ಷಿಣ ವೃತ್ತಕ್ಕೆ ತಾಂತ್ರಿಕ ಮಾಹಿತಿ). | 080-26608675 |
| 4 | ಶ್ರೀಮತಿ ಸಿ. ಕೆ. ಯಶೋಧ | ಪತ್ರಾಂಕಿತ ವ್ಯವಸ್ಥಾಪಕರು | ಸಾರ್ವಜನಿಕ ಮಾಹಿತಿ ಅಧಿಕಾರಿ, (ಬೆಂಗಳೂರು ದಕ್ಷಿಣ ವಲಯದ ಕಚೇರಿ ಆಡಳಿತ ವಿವರ). | 080-26608675 |
| 5 | ಶ್ರೀಮತಿ ರೇಖಾ. ಎನ್ | ಅಧೀಕ್ಷಕರು | ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ, (ಬೆಂಗಳೂರು ದಕ್ಷಿಣ ವಲಯದ ಕಚೇರಿ ಆಡಳಿತ ವಿವರ). | 080-26608675 |

**XVII. ಸಾರ್ವಜನಿಕರಿಗೆ ಸಂಬಂಧಿಸಿದ ಪ್ರಮುಖ ಕಾರ್ಯ ನೀತಿಗಳನ್ನು ರೂಪಿಸುವಾಗ ಅಥವಾ ನಿರ್ಧಾರಗಳನ್ನು ಘೋಷಿಸುವಾಗ ಎಲ್ಲಾ ಸುಸಂಗತ ಸಂಗತಿಗಳನ್ನು ಪ್ರಕಟಿಸತಕ್ಕದ್ದು, ಆಡಳಿತಾತ್ಮಕ ಅಥವಾ ಅರೆನ್ಯಾಯಿಕ ಸ್ವರೂಪದ ನಿರ್ಣಯಗಳಿಂದ ಬಾಧಿತರಾದ ವ್ಯಕ್ತಿಗಳಿಗೆ ಅದರ ಕಾರಣಗಳನ್ನು ಒದಗಿಸತಕ್ಕದ್ದು.**

– ಈ ಇಲಾಖೆಗೆ ಅನ್ವಯಿಸುವುದಿಲ್ಲ.

**ಬೆಂಗಳೂರು ದಕ್ಷಿಣ ವಲಯದ ಅಪೀಲು ಅಧಿಕಾರಿಹೆಸರು ಮತ್ತು ಸಹಿ:**

22/5/2021.

**ಶ್ರೀ. ತೀತಿರಾ. ಎನ್.ಅಪ್ಪಚ್ಚು**
**ಅಪರ ಮುಖ್ಯ ವಿದ್ಯುತ್ ಪರಿವೀಕ್ಷಕರು,**
**ಬೆಂಗಳೂರು ದಕ್ಷಿಣ.**